ಓಎಸ್ 329/2023

ಪಿಡಬ್ಲ್ಯೂ 2

**ಸಾಕ್ಷಿಯು ದಿಃ 03.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 2 ಮತ್ತು 3ನೇ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ಬಳಿ ಮರಣ ಶಾಸನ ಪತ್ರ ಬರೆಸಲು ಬಂದಾಗ ಗೌರಮ್ಮ ರವರಿಗೆ ಸುಮಾರು 50 ವರ್ಷ ವಯಸ್ಸಾಗಿತ್ತು. ಮರಣ ಶಾಸನ ಪತ್ರ ಬರೆಸುವ ಸಲುವಾಗಿ ಗೌರಮ್ಮ ರವರು ನನ್ನ ಬಳಿ ಬಂದ ಪರಿಚಯವಾಗಿರುತ್ತಾರೆ, ಅದಕ್ಕೆ ಮುಂಚೆ ಪರಿಚಯ ಇರಲಿಲ್ಲ. ಮರಣ ಶಾಸನ ಪತ್ರ ಬರೆಸಲು ಗೌರಮ್ಮ ಮತ್ತು ಇಬ್ಬರೂ ಸಾಕ್ಷಿದಾರರಾದ ಬಸಪ್ಪ ಮತ್ತು ಗುರುಸ್ವಾಮಿ ರವರು ನನ್ನ ಬಳಿ ಬಂದಿದ್ದರು. ಆ ಸಂದರ್ಭದಲ್ಲಿ ನಾನು ಗೌರಮ್ಮ ರವರ ವಿಳಾಸದ ದಾಖಲೆಯನ್ನಾಗಲಿ ಮತ್ತು ಅವರ ಕುಟುಂಬದ ವಂಶವೃಕ್ಷವನ್ನಾಗಲಿ ಪರಿಶೀಲನೆ ಮಾಡಿರಲಿಲ್ಲ, ಆದರೆ ಗೌರಮ್ಮ ರವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದಾರೆ ಎಂದು ತಿಳಿಸಿದ್ದರು. ಕಬ್ಬಳ್ಳಿ ಗ್ರಾಮದ ಗುರುಲಿಂಗಪ್ಪನ ಹೆಂಡತಿ ಗೌರಮ್ಮ ರವರು ದಿನಾಂಕ 15.03.1999 ರಂದು ನನ್ನ ಬಳಿ ಯಾವುದೇ ಮರಣ ಶಾಸನ ಪತ್ರ ಬರೆಸಿಲ್ಲ ಎಂದರೆ ಸರಿಯಲ್ಲ. ವಾದಿ ಸುಬ್ಬಮ್ಮ ರವರು ಅವರ ಕೇಸಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನನ್ನಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಸುಬ್ಬಮ್ಮ ರವರು ಗೌರಮ್ಮ ಕೋಂ ಗುರುಲಿಂಗಪ್ಪ ರವರ ಮಗಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ